6. ಹರಾಜು ಡಿಪ್ಯುಟಿ ಕಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡ್ಲೆ, ಹರಾಜುದಾರು, ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ೯ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಿಸಿದ ಹೆಸರು	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ಅಥವಾ ಜಮೀನಿನ ಹೆಸರು.	ಖುಷ್ಕಿ ತರೀ ಅಥವಾ ಬಾಗಾಯಿತು ಇತ್ಯಾದಿ.	ವಿಸ್ತೀರ್ಣ.	ಆಕಾರ	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲಿಯಬೇಕಾದ ಜಪ್ತೀಕಾಯಿದೆ ಜೋಡಿ ಜುಲ್ಮಾನೆ.	ಸರ್ಕಾರಕ್ಕೆ ಬರಬೇಕಾದ ಸೋಫ್ಟ್‌ವೇರ್ ಸಹಿತವಾದ ಬಾಕಿ ಮೊಬಲಗು.
								ಎ. ಗು.	ರೂ. ಆ.	ರೂ.	ರೂ. ಆ. ಪೈ.	ರೂ. ಆ. ಪೈ.
ಮೈಸೂರು	ನರಸಿಂಹ ರಾಜ ಹೋಬಳಿ	ಜೋಡಿ ಗ್ರಾಮದ ನಿರ್ಣ-	ಮ್ಯಾನೇಜರ್ ಭೀಮರಾಯರು	...	ಜೋಡಿ ಗ್ರಾಮದ ನಿರ್ಣ-	...	ಪರಂಪೋಕು	403 10	12 0	ರೂ. 3,000	685 5 4	ಪ್ಲವಂಗದ ಆಖ್ಯೆರು ವರಿಗೆ—
							ಖುಷ್ಕಿ	687 39	561 15			1059 1 8 ಜಪ್ತಿ
						...	ತರಿ ...	21 29	92 4			1 8 0 ಖರ್ಚು
							ಬಾಗಾಯಿತು	41 13	152 4			1060 9 8
								1154 11	818 7			ಬಡ್ಡಿ ಸಹಾ ಬರಬೇಕು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

1908ನೆ ಇಸವಿ ನವಂಬರ್ ಮಾಹೆ ತಾರೀಖು 28ನೆ ತಾರೀಖು ಶನಿವಾರ ಪ್ರಾತಃಕಾಲ 8 ಘಂಟೆಯಲ್ಲಿ ರಂಗಾಚಾರ್ಲು ಮುದರೆ ಮೆನೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ|| ಎಂ. ಕಾಂತರಾಜೆ ಅರಸಿನವರು (ಪ್ರೆಸಿಡೆಂಟ್).
2. ,, ಎಂ. ಜಿ. ಕೃಷ್ಣಸ್ವಾಮಿರಾಯರವರು (ವೈಸ್ ಪ್ರೆಸಿಡೆಂಟ್).
3. ,, ಕೆ. ಚಂದ್ರಶೇಖರೈಯ್ಯನವರು.
4. ,, ಅಂಬಳೆ ಅಣ್ಣಯ್ಯ ಪಂಡಿತರವರು.
5. ,, ಎಸ್. ಶ್ರೀಕಂಠೈಯ್ಯನವರು.
6. ,, ಎಂ. ಸಿ. ರಂಗೈಯ್ಯಂಗಾರ್ಯರವರು.
7. ,, ಎ. ಸುಬ್ಬಣ್ಣನವರು
8. ,, ಎಂ. ನರಸುಹ್ಮಸ್ವಾಮಿಗಳವರು.
9. ,, ಎಂ. ಕೃಷ್ಣಪ್ಪಾಜಿ ಅರಸಿನವರು.
10. ,, ತಿರುವೆಂಗಡ ಪೊದಲಿಯಾರ್ರವರು.
11. ,, ಅನಂತರಾಜೈಯ್ಯನವರು.
12. ,, ರಹಿಮತುಲ್ಲಾ ಅಹಮ್ಮದ್ ಸೇಟರವರು.
13. ,, ಮಾದಪ್ಪನವರು.

ಗೈರ್ ಹಾಜರು.

1. ಮಿ|| ಬಿ. ಸುಬ್ಬರಾಯರವರು (ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ರವರು).
2. ,, ಡಾಕ್ಟರು ಇ. ಎಸ್. ಕೃಷ್ಣಸ್ವಾಮಿ ಐಯ್ಯರವರು, (ಸಿವಿಲ್ ಸರ್ಜ್).

3. ಮಿ|| ಜೆ. ವಿಯರ್ ಸಾಹೇಬರವರು (ಮಹಾರಾಜಾ ಕಾಲೇಜ್ ಪ್ರಿನ್ಸಿಪಲ್).
4. ,, ಸೈದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
5. ,, ಎಂ. ವೆಂಕಟಕೃಷ್ಣಯ್ಯನವರು.
6. ,, ಹಸೇನಲ್ಲಿಬೇಗ್ ಸಾಹೇಬರವರು.
7. ,, ಸೈದ್ ಮೊಹದೀ ಸಾಹೇಬರವರು.

I. 1908ನೆ ಇಸವಿ ಅಕ್ಟೋಬರ್ ಮಾಹೆಯ ಜಮಾ ಖರ್ಚು ಲೆಖ ಆಡಿಟರ್‌ರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲಿಖ್ಖಗಳು.

ಪ್ಯಾಸ್‌ಮಾಡಿದೆ.

II. 1908ನೆ ಇಸವಿ ನವಂಬರ್ ಮಾಹೆಯ ಮ್ಯಾನೇಜಿಂಗ್ ಕಮಿಟಿ ಪ್ರೊಸೀಡಿಂಗ್ಸು.

ಖಾಯಂ ಮಾಡಿದೆ.

III. ಡಿಸ್ಪೆನ್ಸರಿ ಕೆಲಸವನ್ನು ಮ್ಯುನಿಸಿಪಲ್ ಕಛೇರಿವೆಸಿ ಡಿಪಾರ್ಟುಮೆಂಟಿಗೆ ನೇಮಿಸಿ ಡಿಸ್ಪೆನ್ಸರಿಕ್ಷ್ ಲವಾಜವೂ ಪೂರ್ತಾ ಯಾಕೆ ವಜಾ ಮಾಡಬಾರದೆಂದು ಗವರ್ನಮೆಂಟಿನಿಂದ ಸಾದರಾಗಿರುವ 14—10—08ನೆ ಮುಕ್ಕಂ 3551-3—San. 67-08-2ನೆ ನಂಬರ್ ಪ್ರೊಸೀಡಿಂಗ್ಸು.

ಮುಂದಿನ ವಿಚಾರಿಗೆ ಅಜ್ಜರ್ ಮಾಡಿದೆ.

IV. ಮೈಸೂರು ಕೋಟೆಯಲ್ಲಿರುವ ಬಾಲಬೋಧಿನಿ ಗರ್ಲ್ಸ್ ಸ್ಕೂಲಿಗೆ ಮಾಹೆಯಾನಾ 12 ರೂಪಾಯಿ ಗ್ರಾಂಟನೇಡು ಮಂಜೂರ್ಮಾಡಿರುವದಾಗಿ ಗವರ್ನಮೆಂಟಿನಿಂದ ಸಾದರಾಗಿರುವ 31—10—08ನೆ ಮುಕ್ಕಂ 4063-4—Ml. 83-08-4ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

V. ದೊಡ್ಡ ಹೊಲಗೇರಿಯಲ್ಲಿ ಹೊಸದಾಗಿ ಪಡಖಾನಾ ಕಟ್ಟತಕ್ಕ ವಿಷಯದಲ್ಲಿ ಮ್ಯಾನೇಜಿಂಗ್ ಕಮಿಟಿ ರಿಜಲ್ಯೂಷನ್.

10 ರೂಪಾಯಿ ಬಾಡಿಗೆಯನ್ನು ಕೊಡಲು ಕಂಟ್ರಾಕ್ಟರು ಸಿದ್ಧನಾಗಿರುವದ್ದರಿಂದ ಪಡಖಾನಾವನ್ನು ಕಟ್ಟತಕ್ಕದ್ದೆಂದು ತೀರ್ಮಾನಿಸಿದೆ.

VI. ಮೈಸೂರು ಷಹರಿನಲ್ಲಿ ಜನರಲ್ ವಾಟರ್ ಟ್ಯಾಕ್ಸು ಹಾಕತಕ್ಕ ವಿಷಯದಲ್ಲಿ ಮೈಸೂರು ಗೌರ್ನಮೆಂಟು ಜನರಲ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟುಗಳ ಸೆಕ್ರೆಟೆರಿಯವರಿಂದ ತಲಪಿರುವ 8—6—08ನೆ ಮುಕ್ಕಂ 12816—Ml. 530-07-2ನೆ ನಂಬರ್ ಲೆಟರ್.

ಷಹರ್‌ವಾಟರ್ ಸಪ್ಲೈಯು ತುಂಬಾ ಖಾತರಿಯಾಗಿಯೂ ಮತ್ತು ತೃಪ್ತಿಕರವಾಗಿಯೂ ಆಗುವ ಪರಿಯಂತರ ಜನರಲ್ ವಾಟರ್ ಟ್ಯಾಕ್ಸು ಹಾಕುವದನ್ನು ನಿಲ್ಲಿಸಬೇಕೆಂತಲೂ ತನ್ಮಧ್ಯೆ ಈ ಸಂಬಂಧವಾದ ಇತರ ನಡವಳಿಕೆಯನ್ನು ನಡೆಸತಕ್ಕದ್ದೆಂತಲೂ ತೀರ್ಮಾನಿಸಿದೆ.

VII. ಮ್ಯುನಿಸಿಪಲ್ ರೆಗ್ಯುಲೇಷನ್ 144ನೆ ಸೆಕ್ಷನ್ ಕೆಳಗಿನ ಅಧಿಕಾರಗಳನ್ನು ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಕೊಡತಕ್ಕ ವಿಷಯದಲ್ಲಿ ಗೌರ್ನಮೆಂಟಿನವರನ್ನು ಕೇಳಿಕೊಳ್ಳತಕ್ಕದ್ದು ಅವಶ್ಯಕವೇ ಎಂಬ ಭಾಗದಲ್ಲಿ ಮ್ಯಾನೇಜಿಂಗ್ ಕಮಿಟಿಯವರ ರಿಪೋರ್ಟು.

ಮ್ಯಾನೇಜಿಂಗ್ ಕಮಿಟಿಯವರ ಶಿಫಾರಸ್ಸನ್ನು ಅನುಮೋದಿಸತಕ್ಕದ್ದೆಂದು ತೀರ್ಮಾನಿಸಿದೆ.

VIII. ಕೋಟೆ ಸ್ಯಾನಿಟರಿ ಇಂಪ್ರೂವ್‌ಮೆಂಟು ವಿಷಯದಲ್ಲಿ 360 ಮನೆಗಳನ್ನು 6,12,620 ರೂಪಾಯಿಗಳಲ್ಲಿ ಅಕ್ವೈರು ಮಾಡಲು ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 20—11—08ನೆ ಮುಕ್ಕಂ 4741-46-Ml. 69-08-5ನೆ ನಂಬರ್ ನಂಬರು ಪ್ರೊಸೀಡಿಂಗ್ಸು.

ರಿಕಾರ್ಡುಮಾಡಿ ಇದೆ.

IX. ಮೈಸೂರು ಷಹರಿಗೆ ಕುಕ್ಕರಹಳ್ಳಿ ನೀರು ಸರಬರಾಯಿ ಮಾಡತಕ್ಕ ವಿಷಯದಲ್ಲಿ ಚೀಫ್ ಇಂಜನಿಯರವರಿಂದ ತಲಪಿರುವ ಇದೇ ಮಾಹೆ 20ನೆ ಮುಕ್ಕಂ 1059-7285ನೆ ನಂಬರು ಲೆಟರ್ ಸಂಗಡ ತಲಪಿರುವ ನಡವಳಿಕೆ.

ರಿಕಾರ್ಡು ಮಾಡಿದೆ.

ಎಂ. ಕಾಂತರಾಜೇ ಅರಸ್,
ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

ನೋ ಟಿ ಸ.

ತಾರೀಖು 21ನೆ ಡಿಸೆಂಬರ್ 1908, ಹಾಸನ.

ಹಾಸನ ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ, 1907—08ನೆ ಸಾಲ್ ಬಡ್ಡಿ ದಾಖಲ್ಮಾಡತಕ್ಕ ಬಗ್ಗೆ ಪ್ಯಾಸ್ ಬುಕ್ಕುಗಳನ್ನು ಅವರಿಗೆ ಸಮ್ಬಂಧಪಟ್ಟ ಟ್ರೆಜರೀಲಿ ಹಾಜರ್ಪಡಿಸತಕ್ಕದ್ದು.

ನರಸಿಂಗರಾವ್ ಪೂರ್ಣಯ್ಯ,
ಛಾರ್ಜ್ ಡೆಪ್ಯುಟಿ ಕಮಿಷನರ್, ಟ್ರೆಜರಿ ಡಿಪಾರ್ಟ್‌ಮೆಂಟ್.